# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1094**

**ಮಾನ್ಯ ಸದಸ್ಯರ ಹೆಸರು : ಶ್ರೀ ಎಂ. ನಾಗರಾಜು**
**(ವಿಧಾನಸಭೆಯಿಂದ ಚುನಾಯಿತರಾದವರು)**

**ಉತ್ತರಿಸುವ ದಿನಾಂಕ : 20.08.2025**

**ಉತ್ತರಿಸುವ ಸಚಿವರು : ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಒಂದು ವರ್ಷದಲ್ಲಿ 'ಕಾಲು ಮತ್ತು ಬಾಯಿ ರೋಗ, ರಕ್ತಸ್ರಾವ ಸೆಪ್ಟಿಸೆಮಿಯ ಮತ್ತು ಬ್ರೂಸೆಲೋಸಿಸ್, ಕಪ್ಪು ಕಾಲು ಮತ್ತು ಎಂಟರೊಟಾಕ್ಸೆಮಿಯಾ' ನಂತಹ ಸಾಂಕ್ರಾಮಿಕ ರೋಗಗಳ ವಿರುದ್ಧ ಹೋರಾಡಲು ರಾಜ್ಯದಲ್ಲಿ ಎಷ್ಟು ಜಾನುವಾರುಗಳಿಗೆ ಎಷ್ಟು ಕಾಲಾವಕಾಶದಲ್ಲಿ ಲಸಿಕೆ ನೀಡಲಾಗಿದೆ ಮತ್ತು ಎಷ್ಟು ಜಾನುವಾರುಗಳಿಗೆ ಲಸಿಕೆ ಬಾಕಿ ಇದೆ; (ಶೇಕಡವಾರು ಮಾಹಿತಿ ನೀಡುವುದು) | ಜಾನುವಾರು ಆರೋಗ್ಯ ಮತ್ತು ರೋಗ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ನಿಗದಿತ ಲಸಿಕಾ ವೇಳಾ ಪಟ್ಟಿಯಂತೆ ಜಾನುವಾರುಗಳಿಗೆ ವಿವಿಧ ಸಾಂಕ್ರಾಮಿಕ ರೋಗಗಳ ವಿರುದ್ಧ ಲಸಿಕೆ ಹಾಕಲಾಗುತ್ತಿದೆ.<br><br>2024-25ನೇ ಸಾಲಿನಲ್ಲಿ ರಾಜ್ಯದಲ್ಲಿ ಜಾನುವಾರುಗಳಿಗೆ ವಿವಿಧ ರೋಗಗಳ ವಿರುದ್ಧ ಲಸಿಕೆ ಹಾಕಲಾದ ವಿವರಗಳನ್ನು **<u>ಅನುಬಂಧದಲ್ಲಿ</u> ನೀಡಿದೆ.** |
| ಆ) | ನಿಗದಿತ ಸಮಯದಲ್ಲಿ ಲಸಿಕೆ ನೀಡದೇ ಇರುವುದರಿಂದ ಈ ಸಾಂಕ್ರಾಮಿಕ ರೋಗಗಳಿಂದ ಕಳೆದ ಒಂದು ವರ್ಷದಲ್ಲಿ ಸಾವನ್ನಪ್ಪಿದ ಜಾನುವಾರುಗಳ ಸಂಖ್ಯೆ ಎಷ್ಟು; | ಜಾನುವಾರು ಆರೋಗ್ಯ ಮತ್ತು ರೋಗ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ನಿಗದಿತ ಲಸಿಕಾ ವೇಳಾ ಪಟ್ಟಿಯಂತೆ ಜಾನುವಾರುಗಳಿಗೆ ವಿವಿಧ ಸಾಂಕ್ರಾಮಿಕ ರೋಗಗಳ ವಿರುದ್ಧ ಲಸಿಕೆ ಹಾಕಲಾಗಿದೆ. ಕಳೆದ ಒಂದು ವರ್ಷದ ಅವಧಿಯಲ್ಲಿ ರೋಗೋದ್ರೇಕ ಸಂಧರ್ಭಗಳಲ್ಲಿ ಮರಣ ಹೊಂದಿದ ಜಾನುವಾರುಗಳ ವಿವರ ಈ ಕೆಳಕಂಡಂತಿದೆ. |

| ಕ್ರ ಸಂ | ರೋಗ | ಮರಣ ಹೊಂದಿದ ಜಾನುವಾರುಗಳ ಸಂಖ್ಯೆ |
|---|---|---|
| 1. | ಕಾಲು ಬಾಯಿ ಜ್ವರ ರೋಗ | 0 |
| 2. | ಕಂದು ರೋಗ | 0 |
| 3. | ಗಳಲೆ ರೋಗ | 17 |
| 4. | ಚಪ್ಪೆ ರೋಗ | 3 |
| 5. | ಕರಳು ಬೇನೆ | 24 |

...2

| | | |
|---|---|---|
| ಇ) | ರಾಜ್ಯದಲ್ಲಿ ಜಾನುವಾರು ಸಾಕಾಣಿಕೆದಾರರಿಗೆ ಆಧುನಿಕ ಮತ್ತು ವೈಜ್ಞಾನಿಕ ಪಶುಸಂಗೋಪನಾ ಪದ್ಧತಿಗಳು ಮತ್ತು ಇದರ ಬಗ್ಗೆ ಅರಿವು ಮೂಡಿಸುವ ಕುರಿತು ಕೈಗೊಂಡ ಕಾರ್ಯಕ್ರಮಗಳು ಯಾವುವು; | ರಾಜ್ಯದ 30 ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರಗಳಲ್ಲಿ ಕೆಳಕಂಡ ತರಬೇತಿಗಳನ್ನು ರೈತರಿಗೆ ಹಮ್ಮಿಕೊಳ್ಳಲಾಗುತ್ತಿದೆ.<br>• ಆಧುನಿಕ ಹೈನುಗಾರಿಕೆ ತರಬೇತಿ<br>• ವೈಜ್ಞಾನಿಕ ಕುರಿ/ಮೇಕೆ ಸಾಕಾಣಿಕೆ ತರಬೇತಿ<br>• ಕೋಳಿ ಸಾಕಾಣಿಕೆ ತರಬೇತಿ<br>• ಹಂದಿ ಸಾಕಾಣಿಕೆ ತರಬೇತಿ<br><br>ಇಲಾಖೆಯ ವಿಸ್ತರಣಾ ಚಟುವಟಿಕೆಗಳಾದ ಹಾಲು ಕರೆಯುವ ಸ್ಪರ್ಧೆ, ಮಿಶ್ರತಳಿ ಹಸು/ಕರುಗಳ ಪ್ರದರ್ಶನ, ಪಶುಮೇಳ, ಗ್ರಾಮ ಸಭೆಗಳಲ್ಲಿ ಭಾಗವಹಿಸಿ ಇಲಾಖಾ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ಹಾಗೂ ಜಿಲ್ಲಾ ಉತ್ಸವಗಳಲ್ಲಿ ಮಳಿಗೆಗಳನ್ನು ಏರ್ಪಡಿಸುವ ಮೂಲಕ ರೈತರಿಗೆ ಪಶುಸಂಗೋಪನೆ ಪದ್ಧತಿಗಳ ಬಗ್ಗೆ ಅರಿವು ಮೂಡಿಸಲಾಗುತ್ತದೆ.<br><br>ಅಲ್ಲದೆ, ಸ್ಥಳೀಯ ಪತ್ರಿಕೆಗಳಲ್ಲಿ ಹಾಗೂ ಕರಪತ್ರಗಳ ಮೂಲಕ ತರಬೇತಿ ಕುರಿತು ಅರಿವು ಮೂಡಿಸಲಾಗುತ್ತಿದೆ. |
| ಈ) | ಈ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ಸರ್ಕಾರದ ವತಿಯಿಂದ ಆಯೋಜಿಸ ಲಾಗುವುದೇ ಅಥವಾ ಖಾಸಗಿ ಸಂಸ್ಥೆಗಳಿಂದ ತರಬೇತಿ ಕಾರ್ಯ ಕ್ರಮಗಳನ್ನು ನೀಡಲಾಗುತ್ತಿದೆಯೇ; ಖಾಸಗಿ ಸಂಸ್ಥೆಗಳಿಂದ ತರಬೇತಿ ನೀಡಿದ್ದಲ್ಲಿ, ಇದಕ್ಕೆ ತಗಲುವ ವೆಚ್ಚವೆಷ್ಟು?<br>(ಮಾಹಿತಿ ನೀಡುವುದು) | ಈ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ಸರ್ಕಾರದ ವತಿಯಿಂದ ಆಯೋಜಿಸಲಾಗುತ್ತದೆ. |

**ಪಸಂಮೀ 209 ಸಲೆವಿ 2025**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

# ಅನುಬಂಧ

## ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆರಹಿತ ಪ್ರಶ್ನೆ ಸಂಖ್ಯೆ: 902(1094)

### 2024-25ನೇ ಸಾಲಿನಲ್ಲಿ ರಾಜ್ಯದಲ್ಲಿ ಜಾನುವಾರುಗಳಿಗೆ ವಿವಿಧ ರೋಗಗಳ ವಿರುದ್ಧ ಲಸಿಕೆ ಹಾಕಲಾದ ವಿವರ

| ಕ್ರ. ಸಂ | ರೋಗ | ಲಸಿಕೆ ಹಾಕಬೇಕಾದ ಕಾಲಾವಕಾಶ | ಜಾನುವಾರುಗಳ ಸಂಖ್ಯೆ (ಲಕ್ಷಗಳಲ್ಲಿ) ವಾರ್ಷಿಕ ಗುರಿ | ಲಸಿಕೆ ಹಾಕಲಾದ ಜಾನುವಾರುಗಳ ಸಂಖ್ಯೆ (ಲಕ್ಷಗಳಲ್ಲಿ) | ಶೇಕಡ ವಾರು | ಲಸಿಕೆ ಹಾಕಲು ಬಾಕಿ ಇರುವ ಜಾನುವಾರುಗಳ ಸಂಖ್ಯೆ (ಲಕ್ಷಗಳಲ್ಲಿ) | ಶೇಕಡ ವಾರು |
|---|---|---|---|---|---|---|---|
| 1. | ಕಾಲು ಬಾಯಿ ಜ್ವರ ರೋಗ | ದನ ಮತ್ತು ಎಮ್ಮೆ ವರ್ಷಕ್ಕೆ ಎರಡು ಬಾರಿ | 200.42 | 197.03 | 98.31 | 3.39 | 1.69 |
| 2. | ಕಂದು ರೋಗ | **4** ರಿಂದ **8** ತಿಂಗಳ ವಯೋಮಾನದ ದನ ಮತ್ತು ಎಮ್ಮೆ, ಹೆಣ್ಣು ಕರುಗಳು ವರ್ಷಕ್ಕೆ ಮೂರು ಬಾರಿ | 8.64 | 7.82 | 90.50 | 0.82 | 9.50 |
| 3. | ಚಪ್ಪೆ ರೋಗ | ದನ ಮತ್ತು ಎಮ್ಮೆ ವರ್ಷಕ್ಕೊಂದು ಬಾರಿ ಎಂಡೆಮಿಕ್ ಸ್ಥಳಗಳಲ್ಲಿ | 3.00 | 2.80 | 93.33 | 0.20 | 6.67 |
| 4. | ಕರಳು ಬೇನೆ ಎಂಟರೊಟಾಕ್ಸೀಮಿಯಾ | ಕುರಿ ಮತ್ತು ಮೇಕೆ ವರ್ಷಕ್ಕೆ ಎರಡು ಬಾರಿ | 344.40 | 296.19 | 86.00 | 48.21 | 14.00 |
| 5.. | ಗಳಲೆ ರೋಗ | ದನ, ಎಮ್ಮೆ, ಕುರಿ, ಮೇಕೆ ಮತ್ತು ಹಂದಿ ವರ್ಷಕ್ಕೊಂದು ಬಾರಿ ಎಂಡೆಮಿಕ್ ಸ್ಥಳಗಳಲ್ಲಿ | 88.30 | 88.30 | 100.00 | 0 | 0 |